ನೊಂದಿಗೆ ಮಾತನಾಡಿ, ಹುಡುಗಿಯನ್ನು ಮನೆಗೆ ಕರೆಸಿ, ಕಾರ್ತಿಕನಿಗೆ ತೋರಿಸಿ ದರು. ಕೃಷ್ಣಮೂರ್ತಿ ತಮ್ಮ ತೋಟವನ್ನು ಬಸವರಾಜಯ್ಯನವರಿಗೆ ತೋರಿಸುವ ನೆಪದಲ್ಲಿ, ಕಾರ್ತಿಕ ರಾಜಲಕ್ಷ್ಮಿಯನ್ನೂ ಕರೆದುಕೊಂಡು ಬಹಳ ಹೊತ್ತು ತೋಟ ದಲ್ಲಿ ಸುತ್ತಾಡಿದರು. ಕಾರ್ತೀಕನಿಗೂ ತಮ್ಮ ಕೃಷಿಯ ಬದುಕಿಗೆ ಹುಡುಗಿ ಹೊಂದಿ ಕೊಳ್ಳಬಹುದು ಎನಿಸಿತು.



ಬಸವರಾಜಯ್ಯನವರ ಹೆಂಡತಿ ಶಿವಮ್ಮ ರಾಜಲಕ್ಷ್ಮಿಯ ಹತ್ತಿರ ಮಾತನಾಡಿ ಇಂತಹ ದೊಡ್ಡ ಮನೆಯವರ ಮತ್ತು ಅನುಕೂಲಸ್ಥರ ಸಂಬಂಧ ಬಂದಿರುವುದು ಅವಳ ದೊಡ್ಡ ಅದೃಷ್ಟವೆಂದೇ ಹೇಳಿ ಹುಡುಗಿಯ ಒಪ್ಪಿಗೆಯನ್ನು ಪಡೆದರು. ಮುಂದಿನ ಕೆಲಸವನ್ನೆಲ್ಲಾ ಮಾಚಯ್ಯ ಮತ್ತು ಬಸವರಾಜಯ್ಯ ಇಬ್ಬರೂ ಹುರುಪಿ ನಿಂದ ಮುಂದುವರಿಸಿದರು.

ಸುಂಟಿಕೊಪ್ಪದ ರಾಮಮಂದಿರದಲ್ಲಿ ಆರ್ಯ ಸಮಾಜದವರನ್ನು ಕರೆಯಿಸಿ, ಹತ್ತಿರದ ಸಂಬಂಧಿಕರನ್ನು ಮಾತ್ರ ಕರೆದು ಮದುವೆ ನೆರವೇರಿಸಿದರು. ಅನಾಥಾ ಶ್ರಮದಿಂದ ಕೆಲವೇ ಮಂದಿ ಮದುವೆಗೆ ಬಂದಿದ್ದರು. ಆದರೆ ಅವತ್ತು ಅನಾಥಾ ಶ್ರಮದಲ್ಲಿ ಸಂಭ್ರಮವೇ ಸಂಭ್ರಮ. ಎಲ್ಲರಿಗೂ ಭಾರೀ ಊಟದ ವ್ಯವಸ್ಥೆ ಮಾಡಿದ್ದರು. ಗಂಡಿನ ಕಡೆಯವರಿಂದ ವಧುವಿಗೆ ಉತ್ತಮ ಸೀರೆ, ಬಟ್ಟೆ ಬರೆ, ಮತ್ತು ಸಾಕಷ್ಟು ಬಂಗಾರದ ಒಡವೆಗಳನ್ನು ಕೊಟ್ಟಿದ್ದರು. ಅನಾಥಾಶ್ರಮ ದವರೆಲ್ಲರೂ ರಾಜಲಕ್ಷ್ಮಿಯ ಅದೃಷ್ಟವನ್ನು ಕೊಂಡಾಡಿದರು.

ಮದುವೆಯಾದ ಮುಂದಿನ ವಾರ, ನವ ದಂಪತಿ ಮನೆ ದೇವರು ನಂಜನ ಗೂಡಿನ ನಂಜುಂಡೇಶ್ವರನ ದರ್ಶನ ಮಾಡಿಕೊಂಡು ಹನಿಮೂನ್ ಊಟಿಗೆ ಹೋಗುವುದೆಂದು ತೀರ್ಮಾನವಾಯಿತು. ರಾಜಲಕ್ಷ್ಮಿ ಸ್ವಲ್ಪ ನಾಚಿಕೆ ಸ್ವಭಾವ ದವಳೆಂದು, ಮತ್ತು ಅನಾಥಾಶ್ರಮದ ಗುಂಪು ಜೀವನದಿಂದ ಸಾಂಸಾರಿಕ ಜೀವನಕ್ಕೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕೆಂದು ಸುಶೀಲಳಿಗೆನ್ನಿಸಿತು. ರಾಜಲಕ್ಷ್ಮಿ ಹೆಚ್ಚು ಮಾತನಾಡುತ್ತಿರಲಿಲ್ಲ. ಕೆಲವೊಮ್ಮೆ ಸಣ್ಣದಾಗಿ ನಗುವಳು. ಮದುವೆಯಾದ ನಾಲ್ಕನೇ ದಿನ, ಅವತ್ತು ಬೆಳಿಗ್ಗೆ ಕಾರ್ತೀಕ ಏಳುವಾಗ ಸ್ವಲ್ಪ ಹೊತ್ತೇ ಆಗಿತ್ತು. ಮುಖ ತೊಳೆದು ಅಡಿಗೆ ಮನೆಗೆ ಹೋದ. ಹೆಂಡತಿ ಕಾಣಲಿಲ್ಲ. ಎಲ್ಲೊ ಮನೆಯ ಹಿಂದೆ ಕೆಲಸದಲ್ಲಿ ಇರಬೇಕೆಂದುಕೊಂಡ. ತಾಯಿ ಕೊಟ್ಟ ಕಾಫಿ ಕುಡಿದು ತೋಟಕ್ಕೆ ಹೋದ. ಸೊಸೆ ಇನ್ನೂ ಎದ್ದಿಲ್ಲವೆಂದು ತಾಯಿ ಅಂದುಕೊಂಡರು. ಒಂದು ಗಂಟೆಯ ನಂತರ ವಾಪಸ್ಸು ಬಂದಾಗ ಹೆಂಡತಿ ಎಲ್ಲೂ ಕಾಣಲಿಲ್ಲ. ತಾಯಿಯೂ ಅದನ್ನೇ ಹೇಳಿದರು. ಗಾಬರಿಯಿಂದ ಅವಳ ಮೊಬೈಲ್‌ಗೆ ಕಾಲ್ ಮಾಡಿದ. 'ಸ್ವಿಚ್ ಆಫ್' ಅಂತ ಬಂತು. ಅನಾಥಾಶ್ರಮಕ್ಕೆ ಹೋಗಿದ್ದಾ ಳೇನೊ ಎಂದು ಅಲ್ಲಿಗೆ ಫೋನು ಮಾಡಿದ. ಅಲ್ಲಿಗೆ ಹೋಗಿಲ್ಲ ಎನ್ನುವ ಉತ್ತರ ಬಂತು. ಏನಾಯಿತು ಇವಳಿಗೆ ಎಂದು ಮೂವರೂ ಯೋಚಿಸುತ್ತಿರುವಾಗ ಅನಾಥಾಶ್ರಮದಿಂದಲೇ ಫೋನು ಬಂದಿತು. ಮಕ್ಕಳನ್ನು ನೋಡಿಕೊಳ್ಳುವ ಅಲ್ಲಿನ ಆಯಾ ಮಾತನಾಡುತ್ತಿದ್ದಳು. ರಾಜಲಕ್ಷ್ಮಿ ಅವಳ ಓರಗೆಯ ಹುಡುಗಿಯ ಹತ್ತಿರ ಹೇಳಿದ್ದಳಂತೆ, ಅವಳಿಗೆ ಈ ಮದುವೆ ಇಷ್ಟವಿರಲಿಲ್ಲ. ಆಲನಹಳ್ಳಿಯ ಹುಡುಗ ನೊಬ್ಬನನ್ನು ಪ್ರೀತಿಸಿದ್ದಳಂತೆ. ಆ ಹುಡುಗನ ಜೊತೆ ಅವಳು ಬೆಂಗಳೂರಿಗೆ ಓಡಿ ಹೋಗಿರಬೇಕು ಎಂದು ಆಯಾ ಅಳುತ್ತಲೇ ಹೇಳಿದಳು.

ಇವರೆಲ್ಲರಿಗೂ ದಿಗ್ಭ್ರಮೆ. ಹೀಗೂ ಆಗಬಹುದೆ ಎನ್ನುವ ಯೋಚನೆ. ಕಾರ್ತೀಕ ರೂಮಿನಲ್ಲಿ ಅವಳ ಕಪಾಟನ್ನ ತೆಗೆದು ನೋಡಿದರೆ, ಅದು ಖಾಲಿ, ಖಾಲಿ. ಸೀರೆ, ಆಭರಣ, ಬಟ್ಟೆಗಳನ್ನೆಲ್ಲ ಅವಳು ತೆಗೆದುಕೊಂಡು ಓಡಿಹೋಗಿದ್ದಳು. ಹನ್ನೊಂದು ಗಂಟೆಯ ಹೊತ್ತಿಗೆ ಬಸವರಾಜಯ್ಯ ಮತ್ತು ಮಾಚಯ್ಯ ಇಬ್ಬರೂ ಕಿಡಿಕಿಡಿಯಾಗಿ ಬಂದರು. ಪೊಲೀಸ್ ಕಂಪ್ಲೇಂಟ್ ಕೊಡಿ ಎಂದು ಅವರ ಒತ್ತಾಯ. ಕೃಷ್ಣಮೂರ್ತಿ ಮತ್ತು ಕಾರ್ತೀಕ ಕಂಪ್ಲೇಂಟ್ ಕೊಡುವುದು ಬೇಡ ಎಂದು ನಿರ್ಧರಿಸಿದರು. ಅವಳು ವಾಪಸ್ಸು ಬಂದರೆ ಆಮೇಲೆ ಏನು ಮಾಡಬೇಕೆಂದು ತೀರ್ಮಾನಿಸೋಣ. ಈಗ ಕಂಪ್ಲೇಂಟ್ ಕೊಡುವುದೇನೂ ಬೇಡ ಎಂದು ಅವರಿಬ್ಬರನ್ನೂ ವಾಪಸ್ಸು ಕಳುಹಿಸಿದರು. ಅವಳನ್ನು ಹುಡುಕುವ ಪ್ರಯತ್ನವನ್ನೂ ಮಾಡಲಿಲ್ಲ.

ಒಂದು ವಾರ, ಎರಡು ವಾರ, ತಿಂಗಳಾದರೂ ಅವಳ ಸುಳಿವಿಲ್ಲ. ಪ್ರಾರಬ್ಧ ಇಷ್ಟಕ್ಕೇ ಮುಗಿಯಿತು ಎಂದು ಸುಮ್ಮನಾದರು. 'ಹಿಂದು ಮುಂದಿಲ್ಲದ ಹುಡುಗಿ ಯನ್ನು ಕಟ್ಟಿಕೊಂಡರೆ ಇನ್ನೇನಾಗುತ್ತೆ' ಎಂದು ಕೆಲವರು ಆಡಿಕೊಂಡರು.

ಎರಡು ಮೂರು ತಿಂಗಳ ನಂತರ ಸುಶೀಲಮ್ಮ ಮಗನ ಮರು ಮದುವೆಯ ವಿಚಾರವನ್ನು ಮತ್ತೆ ತೆಗೆದರು. ಕಾರ್ತೀಕ ಮಾತನಾಡದೆ ಸುಮ್ಮನೆ ಎದ್ದು ತೋಟದ ಕಡೆಗೆ ಹೊರಡುತ್ತಿದ್ದ. ಕೃಷ್ಣಮೂರ್ತಿ 'ಒಂದೆರಡು ತಿಂಗಳು ಕಳೆಯಲಿ, ಅವನ ಮನಸ್ಸು ಸಮಾಧಾನಗೊಳ್ಳಲಿ, ಆಮೇಲೆ ನೋಡೋಣ' ಎಂದು ಸುಶೀಲಳನ್ನು ಸಮಾಧಾನಪಡಿಸುವರು.

ಊರಿಗೆ ಬರುತ್ತಿದ್ದ ಅವನ ಗೆಳೆಯರಿಗೆ, ಪರಿಚಯದವರಿಗೆ ಕಾರ್ತೀಕ ಅಲ್ಲಿಲ್ಲ ದಾಗ ಸುಶೀಲಮ್ಮ ಮೆಲ್ಲಗೆ ಹೇಳುವರು. 'ನಮ್ಮ ಕಾರ್ತೀಕನಿಗೊಂದು ಒಳ್ಳೆಯ ಹೆಣ್ಣಿದ್ದರೆ ಹೇಳಿ..' ಆದರೆ ಎಲ್ಲಾ ಕಡೆಯಿಂದಲೂ ನಿರಾಸೆಯ ಉತ್ತರವೆ. ಯಾವುದರಲ್ಲೂ ಕಮ್ಮಿ ಇಲ್ಲದ ಕಾರ್ತೀಕನಿಗೇಕೆ ಹೆಣ್ಣು ಸಿಗುವುದಿಲ್ಲ ಎನ್ನುವ ಸುಶೀಲಮ್ಮನ ಪ್ರಶ್ನೆಗೆ ಗಾಂಧಿವಾದಿ ಬಸವರಾಜಯ್ಯನವರ ಉತ್ತರವೇ ಬೇರೆ. 'ಕೃಷಿ ದೇಹ ಶ್ರಮವನ್ನು ಕೇಳುತ್ತೆ. ನಮ್ಮ ದೇಶದಲ್ಲಿ ದೇಹ ಶ್ರಮದ ಉದ್ಯೋಗಕ್ಕೆ ಯಾವಾಗಲೂ ಕೆಳಗಿನ ಸ್ಥಾನವೆ. ಹಾಗಾಗಿ, ಕಾರ್ತೀಕನೊಬ್ಬನಿಗೇ ಈ ತೊಂದರೆ ಅಲ್ಲ. ಕೃಷಿಯಲ್ಲಿ ತೊಡಗಿಕೊಂಡ ಎಲ್ಲರ ಪಾಡೂ ಅಷ್ಟೆ. ಥಳುಕಿನ, ದೇಹಶ್ರಮ ಹೆಚ್ಚಿಲ್ಲದ, ನಗರ ಜೀವನದ ಬಗ್ಗೆ ಎಲ್ಲರಿಗೂ ವ್ಯಾಮೋಹ. ಗಾಂಧೀಜಿ ತಮ್ಮ ಸ್ವಂತ ನಿದರ್ಶನದಿಂದ ದೇಹ ಶ್ರಮದ ಜೀವನಕ್ಕೆ ಗೌರವ ತಂದುಕೊಡಲು ಪ್ರಯತ್ನಿಸಿ ದರು. ಆದರೆ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಆ ಮಹಾತ್ಮನಿಗೂ ಕೂಡ ನಮ್ಮ ದೇಶದ ಜನರ ಪೂರ್ವಕಲ್ಪಿತ ದುರಾಗ್ರಹವನ್ನು ಬದಲಾಯಿಸಲಾಗಲಿಲ್ಲ.' ಸುಶೀಲಮ್ಮನಿಗೆ ಇದ್ಯಾವುದೂ ಅರ್ಥವಾಗುವುದಿಲ್ಲ.

ಈ ಹೆಣ್ಣು ಹುಡುಕುವ, ಮದುವೆ ಮಾಡಿಕೊಳ್ಳುವ ಬಗ್ಗೆ ಕಾರ್ತೀಕನಿಗೂ ಜಿಗುಪ್ಸೆ ಬಂದಿತ್ತು. ಇತ್ತೀಚೆಗೆ ಅವನ ಹೂವಿಗೆ ಬೇಡಿಕೆ ಏರಿತ್ತು. ಮೈಸೂರು, ಮಂಗಳೂರು, ಕೇರಳದಿಂದಲೂ ಹೆಚ್ಚು ಬೇಡಿಕೆ. ಇನ್ನೊಂದು ದೊಡ್ಡ ಪಾಲಿ ಹೌಸ್ ಕಟ್ಟಿ ಹೂವಿನ ಬೆಳೆಯನ್ನು ವಿಸ್ತರಿಸಬೇಕೆಂದು ಆಲೋಚಿಸತೊಡಗಿದ. ಅದಕ್ಕೆ ಬೇಕಾದ ಹಣವೇನೊ ಇತ್ತು. ಆದರೆ ಹೂವಿನ ತೋಟದ ನಾಜೂಕಿನ ಕೆಲಸಕ್ಕೆ ಬೇಕಾದ ಕೆಲಸಗಾರರು ಸಿಗುವುದು ಕಷ್ಟ. ಈಗೀಗ, ಕಾಫಿ ತೋಟದ ಕೆಲಸಕ್ಕೆ ಸ್ಥಳೀಯ ಆಳುಗಳು ಸಿಗದೆ, ದೂರದಿಂದ ಅಂದರೆ ಬಿಹಾರ್, ಒರಿಸ್ಸಾ, ಅಸ್ಸಾಂನಿಂದ ಕೆಲಸಗಾರರನ್ನು ಕರೆದು ತರುತ್ತಿದ್ದರು. ಹಾಗೊಂದು ಅಸ್ಸಾಂನ ಕೆಲಸಗಾರರ ಗುಂಪು ಕುಶಾಲನಗರದ ಹತ್ತಿರ ಕಾಫಿ ತೋಟವೊಂದರಲ್ಲಿ ಬೀಡು ಬಿಟ್ಟಿದೆ ಎಂದು ತಿಳಿಯಿತು. ಅವತ್ತು ಬಿಡುವು ಮಾಡಿಕೊಂಡು ಮೋಟಾರ್ ಸೈಕಲ್ ಮೇಲೆ ಕುಳಿತು, ಆ ಗುಂಪಿನ ಕೆಲವರು ತಮ್ಮ ತೋಟಕ್ಕೆ ಯಾರಾದರೂ ಸಿಗಬಹುದೇನೋ ಎಂದು ಅಲ್ಲಿ ಇಲ್ಲಿ ವಿಚಾರಿಸಿಕೊಂಡು ಆ ಕ್ಯಾಂಪಿನ ಬಳಿ ಹೋದ. ಸಣ್ಣ ಪುಟ್ಟ ಗುಡಿಸಲುಗಳ ಕ್ಯಾಂಪ್ ಇತ್ತು. ಎಲ್ಲರೂ ತೋಟದ ಕೆಲಸಕ್ಕೆ ಹೊರಗೆ ಹೋಗಿದ್ದರು ಅಂತ ಕಾಣುತ್ತದೆ. ಜನರು ಯಾರೂ ಕಾಣಲಿಲ್ಲ. ಅವುಗಳ ಹಿಂದೆ ಮಂಗಳೂರು ಹೆಂಚು ಹಾಸಿದ ದೊಡ್ಡದೊಂದು ಚಪ್ಪರವಿತ್ತು. ಮತ್ತು ಹಳೆಯದಾದ ಕೆಲವು ಮೇಜು, ಕುರ್ಚಿಗಳು ಕಂಡವು. ಅದು ಒಂದು ಸಣ್ಣ ಕ್ಯಾಂಟೀನಿನಂತೆ ಕಂಡಿತು. ಅದರ ಹಿಂದೆ ಮರೆಯಲ್ಲಿ ಹೊಗೆ ಏಳುತ್ತಿತ್ತು. 'ಕೊಯಿ ಹೈ ಕ್ಯಾ' ಎಂದು ದೊಡ್ಡ ದನಿಯಲ್ಲಿ ಎರಡು ಮೂರು ಬಾರಿ ಕೂಗಿದ ಮೇಲೆ ಒಬ್ಬಳು ಅಸ್ಸಾಮಿನವರಂತೆ ಕಾಣುವ ಜೀನ್ಸ್ ಪ್ಯಾಂಟು, ಟೀ ಶರ್ಟ್ ಧರಿಸಿದ್ದ ಯುವತಿ ಹೊರಬಂದಳು.

ಹರಕು ಮುರುಕು ಹಿಂದಿಯಲ್ಲಿ ಕೆಲಸಗಾರರಿದ್ದಾರೇನು? ಎಂದು ಆ ಹುಡುಗಿ ಯನ್ನು ಕೇಳಿದ. ಇವನ ಹರುಕು ಮುರುಕು ಹಿಂದಿಯ ಬದಲಾಗಿ ಆ ಹುಡುಗಿ ಈತನಿಗೆ ಆಶ್ಚರ್ಯವಾಗುವಷ್ಟರ ಮಟ್ಟಿಗೆ ಸ್ವಚ್ಛವಾದ ಇಂಗ್ಲಿಷಿನಲ್ಲಿಯೇ ಉತ್ತರಿಸಿ ದಳು. ಅವಳ ಮಾತಿನಿಂದ ಇವನಿಗೆ ತಿಳಿದಿದ್ದು ಇಷ್ಟು. ಅವರೆಲ್ಲಾ ಅಂದರೆ ಸುಮಾರು ಐವತ್ತು ಜನ ಅಸ್ಸಾಂ ಕಡೆಯಿಂದ ಕಾಫಿ ತೋಟದ ಕೆಲಸಕ್ಕೆ ಬಂದವರೆಂದು ಮತ್ತು ಆಕೆಯ ತಂದೆ ಮಯಾದೂಂಗ್ ಎಂಗ್ಟಿ ತಂಡದ ಮೇಸ್ತ್ರಿ. ತಂದೆ ಸಂಜೆಯ ವೇಳೆಗೆ ಬರಬಹುದು, ಕೆಲಸಗಾರರು ಬೇಕಿದ್ದರೆ ಅವರನ್ನೇ ಕೇಳ ಬೇಕು ಎಂದು ಹೇಳಿದಳು. ದೂರದಿಂದ ಬಂದಿದ್ದೀರಿ.

– 54ನೇ ಪುಟಕ್ಕೆ...